ಕರ್ನಾಟಕ ಸರ್ಕಾರ

ಸಂಖ್ಯೆ: ಜೆ.ಆರ್.ಓ/1(ಎ)/70/2016-17

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ಆಯುಕ್ತಾಲಯ, ಆನಂದರಾವ್ ವೃತ್ತ,
ಬೆಂಗಳೂರು, ದಿನಾಂಕ: 6 -10-2017.

ಇವರಿಗೆ,

ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿಗಳು,
---------------ಜಿಲ್ಲೆ.

**ವಿಷಯ:** ಗುತ್ತಿಗೆ ಆಧಾರದಲ್ಲಿ ನೇಮಕ ಹೊಂದಿರುವ ವೈದ್ಯಾಧಿಕಾರಿಗಳನ್ನು ಖಾಯಂಗೊಳಿಸುವ ಬಗ್ಗೆ.

**ಉಲ್ಲೇಖ:**
1 ಮಾನ್ಯ ಆರೋಗ್ಯ ಸಚಿವರ ಟಿಪ್ಪಣಿ ಪತ್ರ ಸಂಖ್ಯೆ: ಆಕುಕಸ 843 2017-18, ದಿ: 21-08-2017.
2 ಇದೇ ಪತ್ರದ ಸಮ ಸಂಖ್ಯೆ ದಿ: 04-09-2017.
3 ಸರ್ಕಾರದ ಪತ್ರ ಸಂಖ್ಯೆ: ಆಕುಕ 410 ಹೆಚ್ಎಸ್‌ಹೆಚ್ 2017, ದಿ: 03-10-2017.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಮಾನ್ಯ ಆರೋಗ್ಯ ಸಚಿವರ ಟಿಪ್ಪಣಿ ಪತ್ರದಂತೆ ದಿ: 31-08-2017ಕ್ಕೆ ಮೂರು ವರ್ಷ ಪೂರೈಸಿರುವ ಗುತ್ತಿಗೆ ವೈದ್ಯರನ್ನು ಖಾಯಂಗೊಳಿಸಲು ಅಗತ್ಯ ದಾಖಲೆಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು, ಪ್ರಸ್ತುತ ಉಲ್ಲೇಖ (3)ರ ಸರ್ಕಾರದ ಪತ್ರದನ್ವಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ದಿನಾಂಕ: 30-09-2017ಕ್ಕೆ ಮೂರು ವರ್ಷ ಪೂರ್ಣಗೊಳಿಸಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳ ಸೇವೆಯನ್ನು ಖಾಯಂಗೊಳಿಸುವ ಸಂಬಂಧ ನಿಯಮಾನುಸಾರ ಪರಿಶೀಲಿಸಿ, ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ದಿನಾಂಕ: 11-10-2017ರ ಒಳಗೆ ಈ ಆಯುಕ್ತಾಲಯಕ್ಕೆ ಮುದ್ದಾಂ ಸಲ್ಲಿಸಲು ತಿಳಿಸಲಾಗಿದೆ. ವಿಳಂಬ ಮಾಡಿದಲ್ಲಿ ತಮ್ಮನ್ನೇ ನೇರ ಹೊಣೆಗಾರರನ್ನಾಗಿಸಿ ತಮ್ಮ ಹೆಸರನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು.

Shreeroopa 6/10

ಮುಖ್ಯ ಆಡಳಿತಾಧಿಕಾರಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

<u>ಪ್ರತಿಯನ್ನು:</u>

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು- ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಮಾನ್ಯ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು- ಇವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಎಲ್ಲಾ ಸಂಬಂಧಪಟ್ಟ ಗುತ್ತಿಗೆ ವೈದ್ಯಾಧಿಕಾರಿಗಳಿಗೆ.
4. ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸುವುದು.
5. ಕಛೇರಿ ಪ್ರತಿ.